2018 ಕ.ತೀ.ವ 404

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎ.ಎನ್. ವೇಣುಗೋಪಾಲ ಗೌಡ

ಆರ್. ಗಂಗಾಧರಪ್ಪ –ವಿರುದ್ಧ– ಶ್ರೀಮತಿ ಕೊಂಡಲ ನಂಜಮ್ಮ*

ಸಿವಿಲ್ ಪ್ರಕ್ರಿಯಾ ಸಂಹಿತೆಯ 100ನೇ ಪ್ರಕರಣದಡಿಯಲ್ಲಿ ನಿಯತ ಎರಡನೇ ಅಪೀಲು.

ಭಾರತ ಸಂವಿಧಾನದ 141ನೇ ಅನುಚ್ಛೇದ

*ಶ್ರೀಮತಿ ಪಾರ್ವತಮ್ಮ –ವಿರುದ್ಧ– ಶ್ರೀಮತಿ ಉಮಾ ಮತ್ತು ಇತರರು – (2011) 2 ಕೆಎಆರ್.ಎಲ್.ಜೆ 620* ಮತ್ತು *ಆರ್.ಎಸ್.ಎ. ಸಂ.1244/2004*ರ ಪ್ರಕರಣಗಳಲ್ಲಿ ಏಕಪೀಠಗಳ ಮೂಲಕ, ತೀರ್ಮಾನಗಳನ್ನು ನೀಡಲಾಗಿದೆ. ಸಮಾನ ಸಂಖ್ಯೆಯ ನ್ಯಾಯಾಧೀಶರ ನ್ಯಾಯಪೀಠಗಳಿರುವ, ಸರ್ವೋಚ್ಚ ನ್ಯಾಯಾಲಯ ಅಥವಾ ಉಚ್ಚ ನ್ಯಾಯಾಲಯದ ಎರಡೂ ಸದಸ್ಯರ ವಿರೋಧದ ತೀರ್ಪುಗಳಿದ್ದಲ್ಲಿ, ಆ ತರುವಾಯದ ತೀರ್ಪು, ಈ ಮುಂಚಿನ ತೀರ್ಪಿಗಿಂತ ಪ್ರಾಧಾನ್ಯತೆ ಹೊಂದುತ್ತದೆಯೆಂಬುದು ಈಗ ಸುಸ್ಥಾಪಿತವಾದ ಕಾನೂನು ದೃಷ್ಟಿಕೋನವಾಗಿದೆ. ಆದರೆ, ಈ ಮುಂಚಿನ ತೀರ್ಪು, ಹೆಚ್ಚು ನ್ಯಾಯಾಧೀಶರಿರುವ ಪೀಠದ್ದಾಗಿದ್ದು ಮತ್ತು ಆ ತರುವಾಯದ ತೀರ್ಪು, ವಿಭಾಗೀಯ ಪೀಠದ್ದಾಗಿದ್ದು, ಹೆಚ್ಚು ನ್ಯಾಯಾಧೀಶರಿರುವ ಪೀಠದಿಂದ ಹೇಳಲಾದ ಅನುಪಾತವು, ಸದರಿ ತೀರ್ಮಾನಕ್ಕೆ ಬದ್ಧವಾಗಿರುತ್ತದೆ ಮತ್ತು ಅದು, ಆ ತರುವಾಯದ ಸಮಯದಾಗಿದ್ದರೂ ಸಹಾ ವಿಭಾಗೀಯ ಪೀಠದ ತೀರ್ಮಾನವನ್ನು ಮೊದಲ ಆದ್ಯತೆಯಾಗಿ ಅನುಸರಿಸತಕ್ಕದ್ದು.

ಕಾನೂನು ಪ್ರಶ್ನೆಯ ಮೇಲೆ ಸರ್ವೋಚ್ಚ ನ್ಯಾಯಾಲಯದ ಎರಡೂ ತೀರ್ಮಾನಗಳ ಪೈಕಿ ಒಂದನ್ನು, ಹೆಚ್ಚು ನ್ಯಾಯಾಧೀಶರಿರುವ ಪೀಠದಿಂದ ಇನ್ನೊಂದನ್ನು ವಿಭಾಗೀಯ

*ನಿಯತ ಎರಡನೇ ಅಪೀಲು ಸಂಖ್ಯೆ: 95/2016, ದಿನಾಂಕ: 3ನೇ ಏಪ್ರಿಲ್, 2016.

ಪೀಠದ ಮೂಲಕ ಹೊಂದಿಕೆ ಮಾಡಲಾಗದಿದ್ದಲ್ಲಿ, ಹೆಚ್ಚು ನ್ಯಾಯಾಧೀಶರಿರುವ ಪೀಠದ ತೀರ್ಮಾನವನ್ನು, ಅದು, ಈ ಮುಂಚೆಯೇ ಅಥವಾ ಆ ತರುವಾಯ ನಿರ್ದಿಷ್ಟ ಕಾಲಾವಧಿಯಲ್ಲಿ ನೀಡಿದ್ದಾಗ್ಯೂ ಉಚ್ಚ ನ್ಯಾಯಾಲಯಗಳು ಮತ್ತು ಇತರೇ ನ್ಯಾಯಾಲಯಗಳು ಅನುಸರಿಸತಕ್ಕದ್ದು. ಆದಾಗ್ಯೂ ಸರ್ವೋಚ್ಚ ನ್ಯಾಯಾಲಯದ ಅಂಥ ಎರಡೂ ಪೀಠಗಳು, ಸಮಾನ ಸಂಖ್ಯೆಯ ನ್ಯಾಯಾಧೀಶರನ್ನೊಳಗೊಂಡಿದ್ದಲ್ಲಿ, ಸದರಿ ಎರಡು ತೀರ್ಮಾನಗಳಲ್ಲಿ ಎರಡನೆಯದನ್ನು ಉಚ್ಚ ನ್ಯಾಯಾಲಯಗಳು ಮತ್ತು ಇತರೇ ನ್ಯಾಯಾಲಯಗಳು ಅನುಸರಿಸತಕ್ಕದ್ದು.

ವಕೀಲರ ಪರಿಷತ್ ಸದಸ್ಯರು, ನ್ಯಾಯಾಲಯದ ಅಧಿಕಾರಿಗಳಾಗಿದ್ದು, ನ್ಯಾಯಾಲಯಕ್ಕೆ ನೆರವಾಗುವುದು ಅವರ ಬದ್ಧ ಕರ್ತವ್ಯವಾಗಿದೆ. ತೀರ್ಪನ್ನು, ಉದ್ಧರಿಸುವಾಗ, ಉದ್ಧರಿಸಲಾದ ತೀರ್ಪನ್ನು ತರುವಾಯ ರದ್ದುಪಡಿಸಲಾಗಿದೆಯೇ? ಅಥವಾ ಅಸಮ್ಮತಿ ನೀಡಲಾಗಿದೆಯೇ? ಎಂಬುದನ್ನು ವಕೀಲರ ಪರಿಷತ್ತಿನ ಮಾನ್ಯ ಸದಸ್ಯರು ನಿರ್ಣಯಿಸುವುದು ಅವರ ಕರ್ತವ್ಯವಾಗಿದೆ. ತೀರ್ಪಿನ ಉದ್ಧರಣೆಯನ್ನು ಉಚ್ಚ ನ್ಯಾಯಾಲಯದ ಹೆಚ್ಚು ನ್ಯಾಯಾಧೀಶರಿರುವ ಪೀಠ ಅಥವಾ ಸರ್ವೋಚ್ಚ ನ್ಯಾಯಾಲಯವು ರದ್ದು ಮಾಡಿದ್ದು *ಒರಿಸ್ಸಾ ಸರ್ಕಾರ –ವಿರುದ್ಧ– ನಳಿನಿ ಕಾಂತ್ ಮುದುಲಿ – (2004) 7 ಎಸ್‌ಸಿಸಿ 19*ರ ಪ್ರಕರಣದಲ್ಲಿ ಅದನ್ನು ರದ್ದುಮಾಡಲಾಗಿದೆಯೆಂಬ ಸಂಗತಿಯನ್ನು ಬಹಿರಂಗಪಡಿಸದೇ ಅದು ತೀವ್ರ ಕಾಳಜಿವಹಿಸಬೇಕಾದ ವಿಷಯವೆಂದು ಅಭಿಪ್ರಾಯಪಟ್ಟಿದೆ. ರದ್ದು ಮಾಡಿರುವ ತೀರ್ಮಾನವನ್ನು ಉದ್ಧರಿಸಿದಾಗ ಸರ್ವೋಚ್ಚ ನ್ಯಾಯಾಲಯವು ವೃತ್ತಿ ಸಂಬಂಧಿತ ನಡವಳಿಯ ಕುಸಿಯುತ್ತಿರುವ ಗುಣಮಟ್ಟಗಳ ಮೇಲೆ ತನ್ನ ಆಕ್ರೋಶವನ್ನು ವ್ಯಕ್ತಪಡಿಸಿದೆ.

ಪ್ರಸ್ತುತ ಪ್ರಕರಣದಲ್ಲಿ, ಉಭಯ ಕೆಳ ಅಪೀಲು ನ್ಯಾಯಾಲಯಗಳು, ಮತ್ತು ಮಾನ್ಯ ವಕೀಲರು, ಸದರಿ ವಿಷಯದೊಂದಿಗೆ ತೀರಾ ಸಾಮಾನ್ಯವಾಗಿ ವ್ಯವಹರಿಸಿದ್ದಾರೆ.

ನಿಯತ ಎರಡನೇ ಅಪೀಲನ್ನು ಅಂಗೀಕರಿಸಲಾಗಿದೆ.

| ***ಉಲ್ಲೇಖಿಸಲಾದ ಮೊಕದ್ದಮೆಗಳು*** | ***ಪ್ಯಾರಾಗಳಲ್ಲಿ*** |
|---|---|
| *1. (2009)1 ಕೆಎಆರ್.ಎಲ್.ಜೆ. 547 (ಡಿಬಿ)<br>ಪರ್ವತಗೌಡ ನಿಂಗನಗೌಡ ಪಾಟೀಲ್ –ವಿರುದ್ಧ–<br>ಗುಡ್ಡಪ್ಪ ಮತ್ತು ಬೇರೊಬ್ಬರು* | *(ಉಲ್ಲೇ) 8* |
| *2. 2010(2) ಕೆಸಿಸಿಆರ್ 954 (ಡಿಬಿ)<br>ಸೈಯದ್ ಜಾಹೀರ್ ಮತ್ತು ಇತರರು –ವಿರುದ್ಧ–<br>ಸಿ.ವಿ. ಸಿದ್ದವೀರಪ್ಪ,* | *(ಉಲ್ಲೇ) 8* |
| *3. (2011)2 ಕೆಎಆರ್ ಎಲ್‌ಜೆ 620<br>ಶ್ರೀಮತಿ ಪಾರ್ವತಮ್ಮ –ವಿರುದ್ಧ–<br>ಶ್ರೀಮತಿ ಉಮಾ ಮತ್ತು ಇತರರು* | *(ಉಲ್ಲೇ) 9* |
| *4. 2016 ಎಸ್‌ಎಆರ್ (ಸಿಎಲ್) 269<br>ಸತೀಶ್ ಕುಮಾರ್ –ವಿರುದ್ಧ–<br>ಕರಣ್ ಸಿಂಗ್ ಮತ್ತು ಇನ್ನೊಬ್ಬರು* | *(ಉಲ್ಲೇ) 9* |
| *5. (1976) 4 ಎಸ್‌ಸಿಸಿ 52<br>ಉತ್ತರ ಪ್ರದೇಶ ಸರ್ಕಾರ –ವಿರುದ್ಧ–<br>ರಾಮ್ ಚಂದ್ರ ತ್ರಿವೇದಿ* | *(ಉಲ್ಲೇ) 13* |
| *6. ಎಐಆರ್ 1980 ಕೆಎಆರ್ 92(ಎಫ್‌ಬಿ)<br>ಗೋವಿಂದನಾಯಕ್ .ಜಿ, ಕಲಘಟಗಿ –ವಿರುದ್ಧ–<br>ವೇಸ್ಟ್ ಪೇಟೆಂಟ್ ಪ್ರೆಸ್ ಕೋ ಲಿಮಿಟೆಡ್<br>ಮತ್ತು ಬೇರೊಬ್ಬರು* | *(ಉಲ್ಲೇ) 14* |
| *7. ಐಎಲ್‌ಆರ್ 1988 ಕೆಎಆರ್ 1413<br>ಶ್ರೀಮತಿ ಸುಶೀಲಾ .ಎ.ದಾಸ್ –ವಿರುದ್ಧ–<br>ಶ್ರೀಮತಿ ಮೇರಿ ಬೋಲ್‌ಗೇರ್* | *(ಉಲ್ಲೇ) 16* |
| *8. (2004) 7 ಎಸ್‌ಸಿಸಿ 19<br>ಒರಿಸ್ಸಾ ರಾಜ್ಯ –ವಿರುದ್ಧ– ನಳಿನಿ ಕಾಂತ್ ಮುಮಲಿ* | *(ಉಲ್ಲೇ) 17* |

ಅಪೀಲುದಾರರ ಪರ: ಮೆ॥ ಎ. ನಾಗರಾಜಪ್ಪ ಮತ್ತು ಅಸೋಷಿಯೆಟ್ಸ್ ವಕೀಲರ ಪರವಾಗಿ ಶ್ರೀ ಜೆ.ಎನ್. ನವೀನ್ – ವಕೀಲರು.
ಪ್ರತ್ಯಪೀಲುದಾರರ ಪರ: ಶ್ರೀ ಕೆ.ವಿ. ನರಸಿಂಹನ್– ವಕೀಲರ ಪರವಾಗಿ ಶ್ರೀ ಕೆ.ಎನ್. ನಿತೀಶ್, ವಕೀಲರು.

## ತೀರ್ಪು

**ನ್ಯಾಯಮೂರ್ತಿ ಶ್ರೀ ಎ.ಎನ್. ವೇಣುಗೋಪಾಲ ಗೌಡ:**

ವಾದಿಯು, ನಿರ್ದಿಷ್ಟ ಕರಾರು ಪಾಲನೆಗಾಗಿ ಹೂಡಿರುವ ದಾವೆಯ ಎರಡನೇ ನಿಯತ ಅಪೀಲಿನಲ್ಲಿ ಅಪೀಲುದಾರನಾಗಿದ್ದಾನೆ. ದಾವೆಯನ್ನು ವೆಚ್ಚದೊಂದಿಗೆ ಡಿಕ್ರಿ ಮಾಡಲಾಗಿದೆ ಮತ್ತು ಪ್ರತಿವಾದಿಯು, 15,000/– ರೂಪಾಯಿಗಳ ಬಾಕಿ ಮಾರಾಟ ಪ್ರತಿಫಲವನ್ನು ಸ್ವೀಕರಿಸುವ ಮೂಲಕ ವಾದಿಯ ಹೆಸರಿನಲ್ಲಿ ಮಾರಾಟ ಒಪ್ಪಂದದ ಪ್ರಕಾರ ನೋಂದಾಯಿತ ಕ್ರಯಪತ್ರವನ್ನು ಬರೆದು ಕೊಡಲು ನಿರ್ದೇಶಿಸಲಾಗಿದೆ. ಪ್ರತಿವಾದಿಯು ದಾಖಲು ಮಾಡಿದ ಅಪೀಲನ್ನು, ಅಂಗೀಕರಿಸಲಾಗಿದೆ ಮತ್ತು ದಾವೆಯನ್ನು, ಕೆಳ ಅಪೀಲು ನ್ಯಾಯಾಲಯ ವಜಾಗೊಳಿಸಿದೆ. ಸದರಿ ಡಿಕ್ರಿಯನ್ನು ಟೀಕಿಸಿ, ಈ ಎರಡನೇ ನಿಯತ ಅಪೀಲನ್ನು ವಾದಿಯ ದಾಖಲು ಮಾಡಿದ್ದಾನೆ. ಅನುಕೂಲಕ್ಕಾಗಿ, ಪಕ್ಷಕಾರರನ್ನು ಈ ದಾವೆಯಲ್ಲಿ ಅವರ ಕ್ರಮ ಸಂಖ್ಯೆಗೆ ಅನುಗುಣವಾಗಿ ಉಲ್ಲೇಖಿಸಿದ್ದಾರೆ.

2. ವಾದಿಯ ಪ್ರಕರಣವು, ಈ ಕೆಳಗಿನಂತೆ ಸಂಕ್ಷಿಪ್ತವಾಗಿದೆ:

ದಾವೆಯ ಷೆಡ್ಯೂಲ್ ಸ್ವತ್ತಿನ ದಿನಾಂಕ 21.07.1994 ರಂದು ಪ್ರತಿವಾದಿಗೆ ಮಂಜೂರು ಮಾಡಲಾಗಿದೆ ಮತ್ತು ಅವನು, ನಿರುಪಾಧಿಕ ಮಾಲೀಕನಾಗಿರುವುದರಿಂದ, ಒಪ್ಪಂದ ದಿನಾಂಕ 17.11.2004ರ ಬರೆದುಕೊಟ್ಟಿದ್ದು 30,000/– ರೂಪಾಯಿಗಳಿಗಾಗಿ ದಾವೆಯ ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಲು ಒಪ್ಪಿದ್ದಾನೆ ಮತ್ತು ಮುಂಗಡ ಮೊತ್ತದಂತೆ 15,000/– ರೂಪಾಯಿಗಳನ್ನು ಸ್ವೀಕರಿಸಲಾಗಿದೆ. ಮಂಜೂರಾತಿ ಪ್ರಮಾಣ ಪತ್ರದಲ್ಲಿ 15 ವರ್ಷಗಳು ಪರಭಾರೆ ಮಾಡದಿರುವ ಷರತ್ತು ಇರುವುದರಿಂದ,

'ಪರಭಾರೆ ಮಾಡದಿರುವ ಅವಧಿಯ' ಮುಕ್ತಾಯದ ತರುವಾಯ, ಬಾಕಿ ಮಾರಾಟ ಪ್ರತಿಫಲ ಮೊತ್ತವನ್ನು ಸ್ವೀಕರಿಸುವುದರ ಮೂಲಕ ಕ್ರಯಪತ್ರವನ್ನು ಬರೆದು ಕೊಡಲು ಪ್ರತಿವಾದಿಯು ಒಪ್ಪಿಕೊಂಡಿದ್ದಾನೆ. ಪರಭಾರೆ ಮಾಡದಿರುವ ಅವಧಿಯ ಮುಕ್ತಾಯದ ತರುವಾಯ, ಅಂದರೆ, ಡಿಮ್ಯಾಂಡ್ ನೋಟೀಸ್‌ನ್ನು ಜಾರಿ ಮಾಡಿದ ತರುವಾಯ ಸಹ ಕ್ರಯಪತ್ರವನ್ನು ಬರೆದು ಕೊಡದೇ ಇರುವುದರಿಂದ, ದಾವೆಯನ್ನು ದಾಖಲು ಮಾಡಲಾಗಿದೆ.

3. ಪ್ರತಿವಾದಿಯು ಲಿಖಿತ ಹೇಳಿಕೆಯನ್ನು ದಾಖಲು ಮಾಡಿದ್ದಾರೆ ಮತ್ತು ವಾದ ಪತ್ರದಲ್ಲಿ ಮಾಡಿದ ದೃತೋಕ್ತಿಗಳನ್ನು ಅಲ್ಲಗೆಳೆಯಲಾಗಿದೆ ಹಾಗೂ ಒಪ್ಪಂದದಂತೆ ಬರೆದುಕೊಡಲು ಸಹ ವಹಿಸಿಕೊಂಡಿದ್ದರೂ, ದಾವೆಯ ಷೆಡ್ಯೂಲ್ ಸ್ವತ್ತನ್ನು, 15 ವರ್ಷಗಳ ಅವಧಿಯವರೆಗೆ ಪರಭಾರೆ ಮಾಡದಿರುವುದರಿಂದ ಶೂನ್ಯವಾಗುತ್ತದೆಯೆಂದು ವಾದಿಸಿದ್ದಾರೆ. ಕಾಲಪರಿಮಿತಿಯ ಮತ್ತು ಇತರೇ ಪ್ರತಿವಾದಗಳ ಪ್ರತಿಷೇಧವನ್ನು ಸಹ ಗಣನೆಗೆ ತೆಗೆದುಕೊಳ್ಳಲಾಗಿದೆ.

4. ಈ ಮುಂದಿನ ವಿವಾದಾಂಶಗಳ ಸದರಿ ವಾದ ಪ್ರತಿವಾದ ಪತ್ರಗಳ ಮೇಲೆ ನಿರೂಪಿಸಲಾಗಿದೆ.

1. ಪ್ರತಿವಾದಿಯು, 30,000/– ರೂಪಾಯಿಗಳ ಮೊತ್ತಕ್ಕಾಗಿ ದಾವೆಯ ಷೆಡ್ಯೂಲ್ ಸ್ವತ್ತಿನ ಮಾರಾಟಕ್ಕೆ ಒಪ್ಪಿ ದಿನಾಂಕ 17.11.2004 ರಂದು ಮಾರಾಟದ ಒಪ್ಪಂದದಂತೆ ಬರೆದು ಕೊಡುತ್ತಾರೆಂಬುದನ್ನು ವಾದಿಯು ರುಜುವಾತುಪಡಿಸಿದ್ದಾನೆಯೇ?
2. ಪ್ರತಿವಾದಿಯು, ಒಪ್ಪಂದದ ದಿನಾಂಕದಂದು, 15,000/– ರೂಪಾಯಿಗಳನ್ನು ಸ್ವೀಕರಿಸಿದ್ದಾರೆವೆಂಬುದನ್ನು ವಾದಿಯು ರುಜುವಾತು ಪಡಿಸಿದ್ದಾನೆಯೇ?
3. ವಾದಿಯು, ಕರಾರಿನಲ್ಲಿ ತನ್ನ ಪಾಲಿನ ಕಾರ್ಯವನ್ನು ನಿರ್ವಹಿಸಲು ಸಿದ್ಧನಿದ್ದಾನೆಯೇ? ಮತ್ತು ಇಚ್ಛೆಸಿರುವನೇ?

4. ದಾವೆಯ ಷೆಡ್ಯೂಲ್ ಸ್ವತ್ತಿನ ಮೇಲಿರುವ ತನ್ನ ಸ್ವಾಧೀನವನ್ನು ವಾದಿಯು ರುಜುವಾತುಪಡಿಸಿದ್ದಾನೆಯೇ?

5. ದಾವೆಯು, ಪರಿಮಿತದಿಂದ ಪ್ರತಿಷೇಧಿತವಾಗಿದೆಯೇ?

6. ಲಿಖಿತ ಹೇಳಿಕೆಯ ಪ್ಯಾರಾ ಸಂ.17ರಲ್ಲಿ ವಾದಿಸಿರುವಂತೆ ಆಪಾದನೆಗೆ ಒಳಗಾದ ಒಪ್ಪಂದವು ಶೂನ್ಯವಾಗಿದೆಯೆಂಬುದನ್ನು ರುಜುವಾತು ಪಡಿಸಿದ್ದಾನೆಯೇ?

7. ವಾದಿಯು, ಮನವಿ ಮಾಡಿರುವ ಪರಿಹಾರಗಳಿಗಾಗಿ ಹಕ್ಕುಳ್ಳವನಾಗಿರುತ್ತಾನೆಯೇ?

8. ಆದೇಶ ಅಥವಾ ಡಿಕ್ರಿ ಏನು ?

5. ಉಭಯ ಪಕ್ಷಕಾರರು, ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯವನ್ನು ಹಾಜರುಪಡಿಸಿದ್ದಾರೆ. ಸಾಕ್ಷ್ಯವನ್ನು ಪರಿಗಣಿಸಿದ ತರುವಾಯ, ಅಧಿವಿಚಾರಣಾ ನ್ಯಾಯಾಲಯ, 1, 2, 3, 4 ಮತ್ತು 7ನೇ ವಿವಾದಾಂಶಗಳಿಗೆ ಸಕಾರಾತ್ಮಕವಾಗಿ ಮತ್ತು 5 ಹಾಗೂ 6ನೇ ವಿವಾದಾಂಶಗಳಿಗೆ ನಕರಾತ್ಮಕವಾಗಿ ಉತ್ತರಿಸಿದೆ ಮತ್ತು ದಾವೆಯನ್ನು ಡಿಕ್ರಿ ಮಾಡಿದೆ. ಬಾಧಿತನಾದ, ಪ್ರತಿವಾದಿಯು, ಸಿಪಿಸಿಯ 96ನೇ ಪ್ರಕರಣದ ಅಡಿಯಲ್ಲಿ ಅಪೀಲನ್ನು ದಾಖಲು ಮಾಡಿದ್ದಾರೆ.

6. ಕೆಳ ಅಪೀಲು ನ್ಯಾಯಾಲಯ ನಿರ್ಧರಣೆಗಾಗಿ ಈ ಮುಂದಿನ ಪ್ರಶ್ನೆಗಳನ್ನು ಎತ್ತಲಾಗಿದೆ:

1. ಅಧಿವಿಚಾರಣಾ ನ್ಯಾಯಾಲಯ, ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯವನ್ನು ಯುಕ್ತವಾಗಿ ಮತ್ತು ಸರಿಯಾಗಿ ವಿವೇಚಿಸಿರಲಿಲ್ಲವೇ?

2. ಈ ನ್ಯಾಯಾಲಯವು ಅಧಿವಿಚಾರಣಾ ನ್ಯಾಯಾಲಯದ ತೀರ್ಪು ಮತ್ತು ಡಿಕ್ರಿಯನ್ನು ಯಾವುದೇ ಹಸ್ತಕ್ಷೇಪಕ್ಕಾಗಿ ಕರೆದಿದೆಯೇ?

3. ಆದೇಶ ಅಥವಾ ಡಿಕ್ರಿ ಏನು ?

7. ಮಾನ್ಯ ವಕೀಲರ ವಾದಗಳ ಸುನಾವಣೆಯ ತರುವಾಯ, ಆರ್‌ಎಸ್‌ಎ ಸಂ.1244/2004 ರಲ್ಲಿ ಮಾಡಿದ ತೀರ್ಪು ದಿನಾಂಕ 23.09.2010ರ ಮೇಲೆ ಅವಲಂಬಿಸಿದ್ದು, ಕೆಳ ಅಪೀಲು ನ್ಯಾಯಾಲಯ, ಪಕ್ಷಕಾರರ ನಡುವಿನ ಮಾರಾಟ ಒಪ್ಪಂದ, ಸಿಂಧುವಾದ ದಸ್ತಾವೇಜು ಆಗಿರುವುದಿಲ್ಲ, 'ಪರಭಾರೆ ಮಾಡದ ಅವಧಿ'ಯ ಅವಧಿಯಲ್ಲಿ ಅದನ್ನು ಒಪ್ಪಂದ ಮಾಡಿಕೊಂಡಿರುವುದರಿಂದ ಮತ್ತು ಹಾಗೆಯೇ, ಅದು ಸಾರ್ವಜನಿಕ ನೀತಿಗೆ ವಿರುದ್ಧವಾಗಿದೆ ಮತ್ತು ಭಾರತ ಕರಾರು ಅಧಿನಿಯಮದ 23ನೇ ಪ್ರಕರಣದ ಅಡಿಯಲ್ಲಿ ಈ ಕರಾರು, ಶೂನ್ಯವಾಗಿದೆಯೆಂದು ಅಭಿಪ್ರಾಯಪಟ್ಟಿದೆ.

8. ಕೆಳ ಅಪೀಲು ನ್ಯಾಯಾಲಯಗಳು ಪ್ರಸ್ತಾಪಿಸಿದಂತೆ, ಸ್ಪಷ್ಟವಾಗಿ ತಪ್ಪಾಗಿದೆವೆಂಬುದಕ್ಕೆ ಈ ಅಪೀಲು ಪೂರಕವಾಗಿದೆಯೆಂದು ಮಾನ್ಯ ವಕೀಲರಾದ, ಶ್ರೀ ಜೆ.ಎನ್. ನವೀನ್‌ರವರು ವಾದಿಸಿದ್ದಾರೆ. ಆರ್‌ಎಸ್‌ಎ ಸಂ.1244/2004ರಲ್ಲಿ ಮಾಡಿದ ತೀರ್ಪು ದಿನಾಂಕ 23.09.2010ರ ಮೇಲೆ ಅವಲಂಬಿಸಿ ಮಂಡಿಸಲಾಗಿದ್ದು, ಆರ್.ಪಿ. ಸಂ.82/2013ರಲ್ಲಿ ದಿನಾಂಕ 22.07.2013 ರಂದು ರದ್ದುಪಡಿಸಲಾಗಿದೆಯೆಂದು ಅವರು ವಾದ ಮಂಡಿಸಿದ್ದಾರೆ. ಕೆಳ ಅಪೀಲು ನ್ಯಾಯಾಲಯದ ತೀರ್ಪಿನ ಮೇಲೆ ಅವಲಂಬಿಸಿದ್ದು, ಆ ದಿನಾಂಕದಂದು ಅಸ್ತಿತ್ವದಲ್ಲಿ ಇಲ್ಲದ, ಅಪೀಲನ್ನು, ಅಂಗೀಕರಿಸಲಾಗಿದೆಯೆಂದು ಅವರು ವಾದವನ್ನು ಮಂಡಿಸಿದ್ದಾರೆ. ಆರ್‌ಪಿ ಸಂ.82/2013ರಲ್ಲಿ ಮಾಡಿದ ಆದೇಶವನ್ನು, ಕೆಳ ಅಪೀಲು ನ್ಯಾಯಾಲಯ ಪರಿಗಣಿಸಿಲ್ಲವೆಂದು ಮುಂದುವರೆದು ಅವರು ವಾದವನ್ನು ಮಂಡಿಸಿದ್ದಾರೆ. (i) ***ಪರ್ವತಗೌಡ ನಿಂಗನಗೌಡ ಪಾಟೀಲ್ –ವಿರುದ್ಧ– ಗುಡ್ಡಪ್ಪ ಮತ್ತು ಬೇರೊಬ್ಬರು***[1] ಮತ್ತು (ii) ***ಸೈಯದ್ ಜಾಹೀರ್ ಮತ್ತು ಇತರರು –ವಿರುದ್ಧ– ಸಿ.ವಿ. ಸಿದ್ಧವೀರಪ್ಪ***[2], ಪ್ರಕರಣದಲ್ಲಿ ವಿಭಾಗೀಯ ಪೀಠದ ತೀರ್ಮಾನಗಳ ಮೇಲೆ ಅವಲಂಬಿಸುವುದರ ಮೂಲಕ, ದಾವೇ ಒಪ್ಪಂದವು, ಮಂಜೂರಾತಿ ಪ್ರಮಾಣ ಪತ್ರದಲ್ಲಿರುವಂತೆ ಪರಭಾರೆ ಮಾಡದಿರುವ ಷರತ್ತಿನ ಕಾರಣದಿಂದ ಶೂನ್ಯವಾಗುವುದಿಲ್ಲವೆಂದು ಶ್ರೀ ಜೆ.ಎನ್. ನವೀನ್ ರವರು ವಾದ

1. (2009)1 ಕೆಎಆರ್.ಎಲ್.ಜೆ. 547 (ಡಿಬಿ)
2. 2010(2) ಕೆಸಿಸಿಆರ್ 954 (ಡಿಬಿ)

ಮಂಡಿಸಿದ್ದಾರೆ. ಕೆಳ ನ್ಯಾಯಾಲಯ, ಕಾನೂನು ಬಾಹಿರವಾಗಿ ತಪ್ಪು ಮಾಡಿದ್ದು, ವಿಭಾಗೀಯ ಪೀಠಗಳ ಸದರಿ ಎರಡೂ ತೀರ್ಮಾನಗಳನ್ನು ಅನುಸರಿಸಿರುವುದಿಲ್ಲ, ಅದು, ಪ್ರಾಮಾಣಿಕವಾಗಿ ಅನ್ವಯಿಸುತ್ತಿದ್ದು, ಮತ್ತು ಆರ್ಎಸ್ಎ ಸಂ.1244/2004 ರಲ್ಲಿನ ತೀರ್ಪನ್ನು, ಸಮಯವನ್ನು ಸೂಚಿಸಿದ ತರುವಾಯದಲ್ಲಿನ, ಒಡಂಬಡಿಕೆಗಳು, ಈ ಮುಂಚಿನ ತೀರ್ಮಾನಗಳೊಂದಿಗೆ ಸದಸ್ಯರ ವಿರೋಧವಾಗಿದೆಂದು ಅಭಿಪ್ರಾಯಪಡಲಾಗಿದೆಯೆಂದು ಮಾನ್ಯ ವಕೀಲರು ವಾದ ಮಂಡಿಸಿದ್ದಾರೆ.

9. ತದ್‌ವಿರುದ್ಧವಾಗಿ, ಮಂಜೂರಾತಿ ಪ್ರಮಾಣ ಪತ್ರದಲ್ಲಿ 'ಪರಭಾರೆ ಮಾಡದಿರುವ ಷರತ್ತಿ'ನ ಕಾರಣದಿಂದ, ಪ್ರಶ್ನಿಸಿರುವ ಮಾರಾಟ ಒಪ್ಪಂದವು ಶೂನ್ಯವಾಗಿದೆಯೆಂದು ಪ್ರತ್ಯರ್ಜಿದಾರರ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಯಾದ ಶ್ರೀ ಕೆ.ಎನ್. ನಿತೀಶ್ ರವರು ತಮ್ಮ ವಾದ ಮಂಡಿಸಿದ್ದಾರೆ. ***ಶ್ರೀಮತಿ ಪಾರ್ವತಮ್ಮ –ವಿರುದ್ಧ– ಶ್ರೀಮತಿ ಉಮಾ ಮತ್ತು ಇತರರು*** [3], ಪ್ರಕರಣದಲ್ಲಿನ ತೀರ್ಮಾನಕ್ಕೆ ವಿರುದ್ಧವಾಗಿ ಹೊಂದಿದ ಅಧಿವಿಚಾರಣಾ ನ್ಯಾಯಾಲಯದ ತೀರ್ಪು ಮತ್ತು ಡಿಕ್ರಿಯನ್ನು ಅಪೀಲು ನ್ಯಾಯಾಲಯ, ವಾದಿಯು, ಪ್ರತಿವಾದಿಯೊಂದಿಗೆ ಮಾರಾಟ ಒಪ್ಪಂದವನ್ನು ಮಾಡಿಕೊಂಡಿರುವುದಿಲ್ಲವೆಂದು ಅಭಿಪ್ರಾಯಪಟ್ಟಿರುವುದನ್ನು ಸಮರ್ಥಿಸಿಕೊಳ್ಳಲಾಗಿದೆಯೆಂದು ಮಾನ್ಯ ನ್ಯಾಯವಾದಿಯು ವಾದವನ್ನು ಮಂಡಿಸಿದ್ದಾರೆ. ಅವರು ***ಸತೀಶ್ ಕುಮಾರ್ –ವಿರುದ್ಧ– ಕರಣ್ ಸಿಂಗ್ ಮತ್ತು ಇನ್ನೊಬ್ಬರು***[4], ಸರ್ವೋಚ್ಚ ನ್ಯಾಯಾಲಯದ ತೀರ್ಮಾನದ ಮೇಲೆ ಅವಲಂಬಿಸಿದ್ದು, ಸದರಿ ವಿಷಯ ನಿರ್ವಹಣೆಯು ಸಾರ್ವಜನಿಕ ನೀತಿಗೆ ವಿರುದ್ಧ ವಾಗಿರುವುದರಿಂದ ದಾವೆಯ ದಸ್ತಾವೇಜಿನ ಆಧಾರದ ಮೇಲೆ ನಿರ್ದಿಷ್ಟ ಪಾಲನೆಗಾಗಿ ಡಿಕ್ರಿ ಹೊರಡಿಸಲಾಗದು ಎನ್ನುವಷ್ಟರ ಮಟ್ಟಿಗೆ ಅಧಿವಿಚಾರಣಾ ನ್ಯಾಯಾಲಯವು ಹೊರಡಿಸಿದ ಡಿಕ್ರಿಯು ರದ್ದುಪಡಿಸುವುದಕ್ಕೆ ತಕ್ಕುದಾಗಿದೆ ಮತ್ತು ಭಾರತ ಕರಾರು ಅಧಿನಿಯಮದ 23ನೇ ಪ್ರಕರಣದ ಅಡಿಯಲ್ಲಿ ಈ ಕರಾರು ಶೂನ್ಯವಾಗಿದೆಯೆಂದು ವಾದಿಸಿದ್ದಾರೆ.

3. (2011)2 ಕೆಎಆರ್ ಎಲ್‌ಜೆ 620

4. 2016 ಎಸ್ಎಆರ್ (ಸಿವಿಲ್) 269

10. ಪರಿಗಣನೆಗಾಗಿ ಎತ್ತಲಾದ ಕಾನೂನು ಮುಖ್ಯ ಪ್ರಶ್ನೆಯು, ಈ ದಿನ ಅಂದರೆ ಈ ಅಪೀಲಿನ ಸುನಾವಣೆಗೆ ಮುಂಚೆ, ಪ್ರತ್ಯೇಕ ಆದೇಶವನ್ನು ಹೊರಡಿಸುವ ಮೂಲಕ, ''ಕೆಳ ಅಪೀಲು ನ್ಯಾಯಾಲಯವು, ಆರ್‌ಎಸ್‌ಎ ಸಂ.1244/2004ರಲ್ಲಿ ಹೊರಡಿಸಿದ ತೀರ್ಪು ದಿನಾಂಕ 23.09.2010 ರ ಮೇಲೆ ಅವಲಂಬಿಸುವ ಮೂಲಕ ಈ ಅಪೀಲನ್ನು ಅಂಗೀಕರಿಸಿರುವುದನ್ನು ಸಮರ್ಥಿಸಿಕೊಳ್ಳಲಾಗಿದೆಯೇ?'' ಎಂಬುದಾಗಿದೆ.

11. ನಿರ್ವಿವಾದವಾಗಿ, ಗಮನಿಸಿದ್ದು, (ಮೇಲೆ ಹೇಳಲಾದ) (i) ***ಪರ್ವತಗೌಡ ನಿಂಗನಗೌಡ ಪಾಟೀಲ್*** ಮತ್ತು (ii) ***ಸೈಯದ್ ಜಾಹೀರ್*** ಪ್ರಕರಣಗಳಲ್ಲಿ ವಿಭಾಗೀಯ ಪೀಠಗಳಿಂದ ನೀಡಲಾದ ತೀರ್ಮಾನಗಳಿಗೆ ಕೆಳ ಅಪೀಲು ನ್ಯಾಯಾಲಯದ ಗಮನವನ್ನು ಸೆಳೆಯಲಾಗಿದೆ. ಸದರಿ ತೀರ್ಮಾನಗಳಲ್ಲಿ ಹೇಳಲಾದ ಕಾನೂನು ಅನುಪಾತವನ್ನು (ಮೇಲೆ ಹೇಳಲಾದ) (i) ***ಪಾರ್ವತಮ್ಮ*** ಮತ್ತು (ii) ಆರ್‌ಎಸ್‌ಎ ಸಂ.1244/2004 ರಲ್ಲಿನ ತೀರ್ಮಾನಗಳ ಮೇಲೆ ಅವಲಂಬಿಸಿರುವ ಕಾರಣದಿಂದ ಕೆಳ ನ್ಯಾಯಾಲಯವು, ಅದನ್ನು ಅನ್ವಯಿಸಿರುವುದಿಲ್ಲ. ಈ ಮುಂಚಿನ ತೀರ್ಮಾನದೊಂದಿಗೆ ಪರಸ್ಪರ ವಿರೋಧವಾಗಿದ್ದಾಗ ತರುವಾಯದ ತೀರ್ಮಾನವು ಚಾಲ್ತಿಯಲ್ಲಿರುತ್ತದೆಂದು ಕೆಳ ಅಪೀಲು ನ್ಯಾಯಾಲಯವು ಅಭಿಪ್ರಾಯಪಟ್ಟಿದೆ.

12. (i) ***ಶ್ರೀಮತಿ ಪಾರ್ವತಮ್ಮ*** (ಮೇಲೆ ಹೇಳಲಾದ) ಮತ್ತು (ii) ಆರ್.ಎಸ್.ಎ. ಸಂ.1244/2004ರ ಪ್ರಕರಣಗಳಲ್ಲಿ ಏಕಪೀಠಗಳ ಮೂಲಕ, ತೀರ್ಮಾನಗಳನ್ನು ನೀಡಲಾಗಿದೆ. ಸಮಾನ ಸಂಖ್ಯೆಯ ನ್ಯಾಯಾಧೀಶರ ನ್ಯಾಯಪೀಠಗಳಿರುವ, ಸರ್ವೋಚ್ಚ ನ್ಯಾಯಾಲಯ ಅಥವಾ ಉಚ್ಚ ನ್ಯಾಯಾಲಯದ ಎರಡೂ ಸದಸ್ಯರ ವಿರೋಧದ ತೀರ್ಪುಗಳಿದ್ದಲ್ಲಿ, ಆಗ ತರುವಾಯದ ತೀರ್ಪು, ಈ ಮುಂಚಿನ ತೀರ್ಪಿಗಿಂತ ಪ್ರಾಧಾನ್ಯತೆ ಹೊಂದುತ್ತದೆಯೆಂಬುದು ಈಗ ಸುಸ್ಥಾಪಿತವಾದ ಕಾನೂನು ದೃಷ್ಟಿಕೋನವಾಗಿದೆ. ಆದರೆ, ಈ ಮುಂಚಿನ ತೀರ್ಪು, ಹೆಚ್ಚು ನ್ಯಾಯಾಧೀಶರಿರುವ ಪೀಠದ್ದಾಗಿದ್ದು ಮತ್ತು ಆ ತರುವಾಯದ ತೀರ್ಪು, ವಿಭಾಗೀಯ ಪೀಠದ್ದಾಗಿದ್ದು, ಹೆಚ್ಚು ನ್ಯಾಯಾಧೀಶರಿರುವ ಪೀಠದಿಂದ ಹೇಳಲಾದ

ಅನುಪಾತವು, ಸದರಿ ತೀರ್ಮಾನಕ್ಕೆ ಬದ್ಧವಾಗಿರುತ್ತದೆ ಮತ್ತು ಅದು, ಆ ತರುವಾಯದ ಸಮಯದಾಗಿದ್ದರೂ ಸಹಾ ವಿಭಾಗೀಯ ಪೀಠದ ತೀರ್ಮಾನವನ್ನು ಮೊದಲ ಆದ್ಯತೆಯಾಗಿ ಅನುಸರಿಸತಕ್ಕದ್ದು.

13. ***ಉತ್ತರ ಪ್ರದೇಶ ರಾಜ್ಯ -ವಿರುದ್ಧ- ರಾಮ್ ಚಂದ್ರ ತ್ರಿವೇದಿ***[5], ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು, ಹೆಚ್ಚು ನ್ಯಾಯಾಧೀಶರುಗಳಿರುವ ಪೀಠ ಮತ್ತು ವಿಭಾಗೀಯ ಪೀಠದಿಂದ ವ್ಯಕ್ತಪಡಿಸಲಾದ ಅಭಿಪ್ರಾಯಗಳ ನಡುವಿನ ಪರಸ್ಪರ ವಿರೋಧವನ್ನು ನಿರ್ಣಯಿಸಿದ ಉಚ್ಚ ನ್ಯಾಯಾಲಯ, ಯುಕ್ತ ಕ್ರಮಕ್ಕಾಗಿ, ದೀರ್ಘಾವಧಿ ಪೀಠದ ತೀರ್ಮಾನವನ್ನು ನಿರ್ಣಯಿಸಿದ ಅನುಪಾತವನ್ನು ನಿರ್ಣಯಿಸಲಾಗಿದೆ ಮತ್ತು ವಿಭಾಗೀಯ ಪೀಠದಿಂದ ವ್ಯಕ್ತಪಡಿಸಲಾದ ಅಭಿಪ್ರಾಯಕ್ಕೆ ಮೊದಲ ಆದ್ಯತೆ ನೀಡಿ ಅನುಸರಿಸುವುದಾಗಿದೆ.

14. ಸರ್ವೋಚ್ಚ ನ್ಯಾಯಾಲಯದ ಎರಡೂ ತೀರ್ಮಾನಗಳ ನಡುವೆ ಪರಸ್ಪರ ವಿರೋಧವಿದ್ದ ಸಂದರ್ಭದಲ್ಲಿ, ಎರಡೂ ತೀರ್ಮಾನಗಳು ತರುವಾಯದ ಅಥವಾ ಹೆಚ್ಚು ನ್ಯಾಯಾಧೀಶರಿರುವ ಪೀಠದ ತೀರ್ಮಾನವನ್ನು, ದೇಶದಲ್ಲಿ ಉಚ್ಚ ನ್ಯಾಯಾಲಯ ಮತ್ತು ಇತರೇ ನ್ಯಾಯಾಲಯಗಳ ಮೂಲಕ ಅನುಸರಿಸುವ ಸದರಿ ತೀರ್ಮಾನಗಳನ್ನು ನೀಡಿದ್ದು, ಅವುಗಳು ***ಗೋವಿಂದ ನಾಯಕ್ .ಜಿ. ಕಲಘಟಗಿ -ವಿರುದ್ಧ- ವೇಸ್ಟ್ ಪೇಟೆಂಟ್ ಪ್ರೆಸ್ ಕೋ ಲಿಮಿಟೆಡ್ ಮತ್ತು ಬೇರೊಬ್ಬರು***[6], ಪ್ರಕರಣದಲ್ಲಿ ಈ ನ್ಯಾಯಾಲಯದ ಐವರು ಮಾನ್ಯ ನ್ಯಾಯಾಧೀಶರ ಪೂರ್ಣ ಪೀಠದ ಮುಂದೆ ಪರಿಗಣನೆಗಾಗಿ ಬಂದಿದೆ ಮತ್ತು ಸದರಿ ಪ್ರಶ್ನೆಗೆ ಈ ಮುಂದಿನಂತೆ ಉತ್ತರಿಸಲಾಗಿದೆ:

> "5.......... ಕಾನೂನು ಪ್ರಶ್ನೆಯ ಮೇಲೆ ಸರ್ವೋಚ್ಚ ನ್ಯಾಯಾಲಯದ ಎರಡೂ ತೀರ್ಮಾನಗಳ ಪೈಕಿ ಒಂದನ್ನು, ಹೆಚ್ಚು ನ್ಯಾಯಾಧೀಶರಿರುವ ಪೀಠದಿಂದ ಇನ್ನೊಂದನ್ನು ವಿಭಾಗೀಯ ಪೀಠದ

5. (1976) 4 ಎಸ್‌ಸಿಸಿ 52

6. ಎಐಆರ್ 1980 ಕೆಎಆರ್ 92(ಎಫ್‌ಬಿ)

> ಮೂಲಕ ಹೊಂದಿಕೆ ಮಾಡಲಾಗದಿದ್ದಲ್ಲಿ, ಹೆಚ್ಚು ನ್ಯಾಯಾಧೀಶರಿರುವ ಪೀಠದ ತೀರ್ಮಾನವನ್ನು, ಅದು, ಈ ಮುಂಚೆಯೇ ಅಥವಾ ಆ ತರುವಾಯ ನಿರ್ದಿಷ್ಟ ಕಾಲಾವಧಿಯಲ್ಲಿ ನೀಡಿದ್ದಾಗ್ಯೂ, ಉಚ್ಚ ನ್ಯಾಯಾಲಯಗಳು ಮತ್ತು ಇತರೇ ನ್ಯಾಯಾಲಯಗಳು ಅನುಸರಿಸತಕ್ಕದ್ದು. ಆದಾಗ್ಯೂ ಸರ್ವೋಚ್ಚ ನ್ಯಾಯಾಲಯದ ಅಂಥ ಎರಡೂ ಪೀಠಗಳು, ಸಮಾನ ಸಂಖ್ಯೆಯ ನ್ಯಾಯಾಧೀಶರನ್ನೊಳಗೊಂಡಿದ್ದಲ್ಲಿ, ಸದರಿ ಎರಡು ತೀರ್ಮಾನಗಳಲ್ಲಿ ಎರಡನೆಯದನ್ನು ಉಚ್ಚ ನ್ಯಾಯಾಲಯಗಳು ಮತ್ತು ಇತರೇ ನ್ಯಾಯಾಲಯಗಳು ಅನುಸರಿಸತಕ್ಕದ್ದು"
>
> (ಒತ್ತು ನೀಡಲಾಗಿದೆ)

15. ಮೇಲಿನ ಅಭಿಪ್ರಾಯದಿಂದ, (ಮೇಲೆ ಹೇಳಲಾದ) (i) ***ಶ್ರೀಮತಿ ಪಾರ್ವತಮ್ಮ*** ಮತ್ತು (ii) ಆರ್‌ಎಸ್‌ಎ ಸಂ.1244/2004 ರಲ್ಲಿನ ತೀರ್ಮಾನಗಳು ನಿರ್ಣಯವು (ಮೇಲೆ ಹೇಳಲಾದ) (i) ಪಾರ್ವತಗೌಡ ನಿಂಗನಗೌಡ ಪಾಟೀಲ್ (ii) ಸೈಯದ್ ಜಾಹೀರ್, ಪ್ರಕರಣಗಳಲ್ಲಿನ ತೀರ್ಮಾನಗಳಲ್ಲಿ ನಿರ್ದಿಷ್ಟ ಕಾಲಾವಧಿಯಲ್ಲಿ ತರುವಾಯದ್ದಾಗಿದ್ದು ಹೆಚ್ಚು ಪ್ರಾಧಾನ್ಯವುಳ್ಳದ್ದಾಗಿದೆಯೆಂದು ಕೆಳ ನ್ಯಾಯಾಲಯದಿಂದ ದಾಖಲಿಸಲಾದ ನಿರ್ಣಯವು ಅದಕ್ಕಿಂತ ಮುಂಚಿನ ಕಾನೂನನ್ನು ತಪ್ಪಾಗಿ ಅರ್ಥೈಸಿರುವುದನ್ನು ಆಧರಿಸಿದೆ. ಹಾಗಾಗಿ, ಕೆಳ ಅಪೀಲು ನ್ಯಾಯಾಲಯವು ವ್ಯಕ್ತಪಡಿಸಿದ ಅಭಿಪ್ರಾಯವು, ನಿರುಪಾಧಿಕವಾಗಿ ಅಸಮರ್ಥನೀಯವಾಗಿದೆ ಮತ್ತು ಮಾಡಿದ ತೀರ್ಪು ಮತ್ತು ಡಿಕ್ರಿಯನ್ನು ಇದರಲ್ಲಿ ಪ್ರಶ್ನಿಸಿದ್ದು, ರದ್ದುಪಡಿಸುವುದಕ್ಕೆ ಹೊಣೆಯಾಗುತ್ತದೆ.

16. ಆರ್‌ಎಸ್‌ಎ ಸಂ.1244/2004 ರಲ್ಲಿ ಮಾಡಿದ ತೀರ್ಪು ದಿನಾಂಕ 23.09.2010ರ ತೀರ್ಪನ್ನು, ***ಶ್ರೀಮತಿ ಸುಶೀಲಾ .ಎ.ದಾಸ್ –ವಿರುದ್ಧ– ಶ್ರೀಮತಿ ಮೇರಿ ಬೋಲ್‌ಗೇರ್***[7], ಪ್ರಕರಣದಲ್ಲಿನ ತೀರ್ಮಾನವನ್ನು ಉಲ್ಲೇಖ ಮಾಡಿದ

7. ಐಎಲ್‌ಆರ್ 1988 ಕೆಎಆರ್ 1413

ತರುವಾಯ, ದಿನಾಂಕ 22.07.2013 ರಂದು ತೀರ್ಮಾನಿಸಿದ ಪುನರವಲೋಕನ ಅರ್ಜಿ ಸಂ.82/2013ರಲ್ಲಿ ಅದನ್ನು ರದ್ದುಪಡಿಸಲಾಗಿದೆ ಎಂಬುದು ವಿವಾದವಾಗುವುದಿಲ್ಲ. ಪ್ರಶ್ನಿತ ತೀರ್ಪು, ಶೂನ್ಯವಾಗಿದ್ದು, ಹಾಗೇ ಮಾಡಿದಂತೆ, ಕೆಳ ಅಪೀಲು ನ್ಯಾಯಾಲಯವು, ಆರ್‌ಎಸ್‌ಎ ಸಂ.1244/2004 ರಲ್ಲಿ ಮಾಡಿದ ತೀರ್ಪು ದಿನಾಂಕ 23.09.2010ರ ಮೇಲೆ ಪ್ರಮುಖವಾಗಿ ಅವಲಂಬಿಸಿದ್ದು, ಆ ತೀರ್ಪನ್ನು ಈಗಾಗಲೇ ಹೇಳಿದಂತೆ, ಆರ್‌ಪಿ ಸಂ.82/2013ರಲ್ಲಿ ದಿನಾಂಕ 22.07.2013 ರಂದು ರದ್ದುಪಡಿಸಲಾಗಿದೆ.

17. ಆರ್‌ಎಸ್‌ಎ ಸಂ.1244/2004ರಲ್ಲಿ ದಿನಾಂಕ 23.09.2010 ರ ತೀರ್ಪನ್ನು ರದ್ದುಪಡಿಸಿ, ಆರ್.ಪಿ ಸಂ.82/2013ರಲ್ಲಿ ಮಾಡಿದ ದಿನಾಂಕ 22.07.2013ರ ಆದೇಶವನ್ನು ಕೆಳ ಅಪೀಲು ನ್ಯಾಯಾಲಯದ ಗಮನಕ್ಕೆ ತರಲಾಗಿದೆ ಎಂದು ಕಂಡುಬಂದಿರುವುದಿಲ್ಲ. ವಕೀಲರ ಪರಿಷತ್ ಸದಸ್ಯರು, ನ್ಯಾಯಾಲಯದ ಅಧಿಕಾರಿಗಳಾಗಿದ್ದು, ನ್ಯಾಯಾಲಯಕ್ಕೆ ನೆರವಾಗುವುದು ಅವರ ಬದ್ಧ ಕರ್ತವ್ಯವಾಗಿದೆ. ತೀರ್ಪನ್ನು, ಉದ್ಧರಿಸುವಾಗ, ಉದ್ಧರಿಸಲಾದ ತೀರ್ಪನ್ನು ತರುವಾಯ ರದ್ದುಪಡಿಸಲಾಗಿದೆಯೇ? ಅಥವಾ ಅಸಮ್ಮತಿ ನೀಡಲಾಗಿದೆಯೇ? ಎಂಬುದನ್ನು ವಕೀಲರ ಪರಿಷತ್ತಿನ ಮಾನ್ಯ ಸದಸ್ಯರು ನಿರ್ಣಯಿಸುವುದು ಅವರ ಕರ್ತವ್ಯವಾಗಿದೆ. ತೀರ್ಪಿನ ಉದ್ಧರಣೆಯನ್ನು ಉಚ್ಚ ನ್ಯಾಯಾಲಯದ ಹೆಚ್ಚು ನ್ಯಾಯಾಧೀಶರಿರುವ ಪೀಠ ಅಥವಾ ಸರ್ವೋಚ್ಚ ನ್ಯಾಯಾಲಯವು ರದ್ದು ಮಾಡಿದ್ದು ***ಒರಿಸ್ಸಾ ಸರ್ಕಾರ -ವಿರುದ್ಧ- ನಳಿನಿ ಕಾಂತ್ ಮುದುಲಿ***[8], ಪ್ರಕರಣದಲ್ಲಿ ಅದನ್ನು ರದ್ದುಮಾಡಲಾಗಿದೆಯೆಂಬ ಸಂಗತಿಯನ್ನು ಬಹಿರಂಗಪಡಿಸದೇ ಅದು ತೀವ್ರ ಕಾಳಜಿವಹಿಸಬೇಕಾದ ವಿಷಯವೆಂದು ಅಭಿಪ್ರಾಯಪಟ್ಟಿದೆ. ರದ್ದು ಮಾಡಿರುವ ತೀರ್ಮಾನವನ್ನು ಉದ್ಧರಿಸಿದಾಗ ಸರ್ವೋಚ್ಚ ನ್ಯಾಯಾಲಯವು ವೃತ್ತಿ ಸಂಬಂಧಿತ ನಡವಳಿಯ ಕುಸಿಯುತ್ತಿರುವ ಗುಣಮಟ್ಟಗಳ ಮೇಲೆ ತನ್ನ ಆಕ್ರೋಶವನ್ನು ವ್ಯಕ್ತಪಡಿಸಿದೆ.

8. (2004) 7 ಎಸ್‌ಸಿಸಿ 19

18. ಪ್ರಸ್ತುತ ಪ್ರಕರಣದಲ್ಲಿ, ಉಭಯ ಕೆಳ ಅಪೀಲು ನ್ಯಾಯಾಲಯಗಳು, ಮತ್ತು ಮಾನ್ಯ ವಕೀಲರು, ಸದರಿ ವಿಷಯದೊಂದಿಗೆ ತೀರಾ ಸಾಮಾನ್ಯವಾಗಿ ವ್ಯವಹರಿಸಿದ್ದಾರೆ.

19. ಕೆಳ ನ್ಯಾಯಾಲಯವು ಕಾನೂನಿಗೆ ಅನುಸಾರವಾಗಿ ಅಪೀಲನ್ನು ಪರಿಗಣಿಸದೇ ಇರುವುದರಿಂದ, ಅಸಮರ್ಥತತೆ ಹೊಂದಿದ ಪ್ರಶ್ನಿತ ತೀರ್ಪು ಮತ್ತು ಡಿಕ್ರಿಯನ್ನು, ರದ್ದುಪಡಿಸಲಾಗಿದೆ ಮತ್ತು ಕಾನೂನು ಹಾಗೂ ಸಂಗತಿಯ ಎಲ್ಲಾ ಪ್ರಶ್ನೆಗಳ ಮೇಲೆ ಎರಡೂ ಕಡೆಯ ವಾದಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳುವ ಮೂಲಕ, ಹೊಸದಾಗಿ ತೀರ್ಮಾನಿಸುವುದಕ್ಕಾಗಿ ಈ ಅಪೀಲನ್ನು ಹಿಂದಕ್ಕೆ ಕಳುಹಿಸಲಾಗಿದೆ. ಪಕ್ಷಕಾರರ ಪ್ರಕರಣದ ಅರ್ಹತೆಗೆ ಸಂಬಂಧಿಸಿದಂತೆ ಯಾವುದೇ ಅಭಿಪ್ರಾಯವನ್ನು ವ್ಯಕ್ತಪಡಿಸಿರುವುದಿಲ್ಲ.

ಪ್ರಕರಣದ ಸುನಾವಣೆ ಮತ್ತು ವಿಲೆಯನ್ನು ಆದೇಶಿಸಿರುವುದು ಯಥೋಚಿತವಾಗಿರುವುದರಿಂದ, ಉಭಯ ಪಕ್ಷಕಾರರಿಗೆ, 30ನೇ ಏಪ್ರಿಲ್ 2016 ರಂದು, ಚಿಕ್ಕಬಳ್ಳಾಪುರದ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದ ಮುಂದೆ ಹಾಜರಾಗಲು ಮತ್ತು ಮುಂದಿನ ಆದೇಶಗಳನ್ನು ಸ್ವೀಕರಿಸಲು ನಿರ್ದೇಶಿಸಲಾಗಿದೆ. ಈ ಅಪೀಲನ್ನು, 30ನೇ ಸೆಪ್ಟಂಬರ್, 2016ಕ್ಕೆ ಮುಂಚಿತವಾಗಿ ತೀರ್ಮಾನಿಸತಕ್ಕದ್ದು.